ಇಬ್ಬರಿಗೂ ತಡೆಮಕೊಳ್ಳಲಾಗದ ದುಃಖ ಉಕ್ಕಿ ಬಂದು ಅಳ ಲಾರಂಭಿಸಿದರು. ಅದೇ ಅವರ ಕಡೆಯ ಭೇಟಿಯೆಂದು ದೈವ ನಿಯಾಮಕವೇ ಆಗಿತ್ತು. ಸ್ವಾಮಿ ಶಾರದಾನಂದರ ಆಶೀರ್ವಾದವನ್ನು ಪಡೆಯಲು ಉದ್ಬೋಧನಕ್ಕೆ ಭೇಟಿಕೊಟ್ಟು ಆತ್ಮಾನಂದರು ಕಾಶಿಯ ಕಡೆಗೆ ಹೊರಟರು.

ಕಾಶಿ ಕ್ಷೇತ್ರವನ್ನು ಸೇರಿದ ಆತ್ಮಾನಂದರು ಅಲ್ಲಿನ ಭಕ್ತರಿಗೆ ಮಠದ ಸಾಧು ಬ್ರಹ್ಮಚಾರಿಗಳಿಗೆ ಅತ್ಯಂತ ಆನಂದವನ್ನುಂಟು ಮಾಡಿದರು. ಅನೇಕ ಆಧ್ಯಾತ್ಮಿಕ ಕಾರ್ಯಕ್ರಮಗಳಿಂದಾಗಿ ಭಕ್ತರೆಲ್ಲಾ ಶಾರೀರಿಕ, ಮಾನಸಿಕ, ನೈತಿಕ, ಆಧ್ಯಾತ್ಮಿಕ ಶಕ್ತಿಗಳನ್ನು ಅರ್ಜಿಸ ಲಾರಂಭಿಸಿದರು.

ಹೀಗೆ ಕೆಲವು ಕಾಲ ಕಳೆಯಲು ಆತ್ಮಾನಂದರು ಏಕಾಂತದಲ್ಲಿ ಗಂಗಾ ವಟದಲ್ಲಿ ಕುಳಿತು ಜಪಧ್ಯಾನಾದಿಗಳನ್ನು ಮಾಡುತ್ತಿದ್ದರು. ಹೆಚ್ಚು ಸಮಯ ಸಾಧನೆ ಭಜನೆಗಳಲ್ಲೇ ಕಳೆದುಹೋಗುತ್ತಿತ್ತು. ಆದರ್ಶ ಜೀವನವೇ ಮೂರ್ತೀಭವಿಸಿದಂತಿದ್ದ ಆತ್ಮಾನಂದರ ವ್ಯಕ್ತಿತ್ವ ಎಲ್ಲರನ್ನೂ ಮುಗ್ಧಗೊಳಿಸುತ್ತಿತ್ತು.

ಅಕಸ್ಮಾತ್ತಾಗಿ ಆತ್ಮಾನಂದರಿಗೆ ಜ್ವರ ಬಂತು. ಕ್ರಮೇಣ ಅದು ನ್ಯುಮೋನಿಯಾ ಆಗಿ ಪರಿಣಮಿಸಿತು. ವೈದ್ಯಕೀಯ ಚಿಕಿತ್ಸೆಯಿಂದ ಏನೂ ಪ್ರಯೋಜನವಾಗಲಿಲ್ಲ. ಒಂದು ದಿನ ಅವರು ತಮಗೆ ಸೇವೆ ಗೈಯುತ್ತಿದ್ದವರಿಗೆ ಹೇಳಿದರು, "ಇನ್ನು ಹೆಚ್ಚು ದಿನ ನಾನು ನಿಮಗೆ ಶ್ರಮ ಕೊಡುವುದಿಲ್ಲ. ನನಗೆ ಸ್ವಾಮೀಜಿಯವರ ಕರೆ ಬಂದಿದೆ" ಎಂದು.

೧೯೨೩ರ ಅಕ್ಟೋಬರ್ ೧೨ರಂದು ಸಂಜೆ ೭.೨೫ಕ್ಕೆ ಶಿವಕ್ಷೇತ್ರವಾದ ಕಾಶಿಯಲ್ಲಿ ಆತ್ಮಾನಂದರು ದೇಹತ್ಯಾಗ ಮಾಡಿದರು. ಆ ಸುದ್ದಿಯನ್ನು ಸ್ವಾಮಿ ಶುದ್ಧಾನಂದರು ಅಧ್ಯಕ್ಷರಾದ ಸ್ವಾಮಿ ಶಿವಾನಂದರಿಗೆ ತಿಳಿಸಲು ಅವರು, "ಶುಕುಲ್ ಮಹಾರಾಜ್ ಮಹಾನುಭಾವ" ಎಂದರು. ಈ ರೀತಿಯಲ್ಲಿ ಶ್ರದ್ಧೆ, ವಿನಯ, ಆತ್ಮತತ್ಪರತೆ ಮುಂತಾದ ಸದ್ಗುಣಗಳಿಂದ ಅರಳಿದ ಆತ್ಮಪದ್ಮವೊಂದು ಸ್ವಾಮಿ ವಿವೇಕಾನಂದರ ಚರಣಗಳನ್ನು ಅಲಂಕರಿಸಿತು. ✻

# "ಪ್ರೋಸ್ತಾಂ ಪರ್ಬು" ಇದರ ಬಗ್ಗೆ ಒಂದು ಮಾತು

**ಸ್ವಾಮಿ ರಾಘವೇಶಾನಂದ**

ಬೆಂಗಳೂರಿನಲ್ಲಿ ಅಲಸೂರಿನ ವಿವೇಕಾನಂದ ಆಶ್ರಮದ ಅಧ್ಯಕ್ಷರಾಗಿರುವ ಸ್ವಾಮಿ ರಾಘವೇಶಾನಂದರು ನಮ್ಮ ಓದುಗರಿಗೆ ಪರಿಚಿತರು. ಅವರು ಅಕ್ಟೋಬರ್ ಸಂಚಿಕೆಯಲ್ಲಿ ಪ್ರಕಟವಾದ ಪೋಸ್ತಾಂ ಪರ್ಬು ಲೇಖನದ ಬಗ್ಗೆ ತಮ್ಮ ಪ್ರತಿಕ್ರಿಯೆಯನ್ನು ಈ ಲೇಖನದಲ್ಲಿ ವ್ಯಕ್ತಪಡಿಸಿದ್ದಾರೆ.

**ಈ ಪತ್ರಿಕೆಯ ಅಕ್ಟೋಬರ್** (2001) ಸಂಚಿಕೆಯಲ್ಲಿ ಪೋಸ್ತಾಂ ಪರ್ಬು ಕಥೆಯನ್ನು ಓದಿ ಸರಿಯಾಗಿ ಅರ್ಥಮಾಡಿಕೊಳ್ಳಲಾಗದೆ ಕೆಲವು ಭಕ್ತರು "ಭಗವಂತನನ್ನು ಪ್ರಾರ್ಥಿಸುವ ಆವಶ್ಯಕತೆ ಇದೆಯೇ?" ಎಂದು ನನ್ನನ್ನು ಪ್ರಶ್ನಿಸಿದರು. ಪೋಸ್ತಾಂ ಪರ್ಬು ಕ್ರೈಸ್ತಧರ್ಮ ಸಾಂಪ್ರದಾಯಿಕವಾಗಿ ಒಪ್ಪಿಕೊಂಡ ಮಾರ್ಗಕ್ಕಿಂತ ಭಿನ್ನವಾದ ಮಾರ್ಗವನ್ನು ಹಿಡಿದು ಬರೀ ದುಡಿಮೆ, ಪರೋಪಕಾರ ಮುಂತಾದ ಸತ್ಕರ್ಮಗಳಿಂದ ಮಾತ್ರವೇ ನರಕವನ್ನೇ ಸ್ವರ್ಗವನ್ನಾಗಿ ಮಾರ್ಪಡಿಸಿದ ಒಬ್ಬ ಮಹಾತ್ಮ. ಅಂತಹ ಮಹಾತ್ಮರು ಅತಿ ವಿರಳ. ಅಲ್ಲದೆ ಅಂತಹವರು ಹಿಂದೆ ಹಲವಾರು ಸಾಧನೆಗಳನ್ನು ಮಾಡಿ ಕೊನೆಗೆ ಆ ಪರಿಪಕ್ವ ನೆಲೆಯನ್ನು ಹೊಂದಿರುತ್ತಾರೆ. ಪೋಸ್ತಾಂ ಪರ್ಬುವನ್ನು ವೇದಾಂತದ ಜನಕ ಮಹಾರಾಜನಿಗೆ ಹೋಲಿಸಬಹುದು. ಅವನು ಕರ್ಮಯೋಗದಿಂದಲೆ ಸಾಕ್ಷಾತ್ಕಾರವನ್ನು ಪಡೆದ ಎಂದು ಗೀತೆಯಲ್ಲಿ ಹೇಳಿದೆ. ಇದರ ಪ್ರಸ್ತಾಪ ಬಂದಾಗ ಶ್ರೀರಾಮಕೃಷ್ಣರು ಹೇಳುತ್ತಾರೆ—"ಜನಕ ಒಂದೇ ಸಲಕ್ಕೆ ಅಂತಹ ಸ್ಥಿತಿಯನ್ನು ಪಡೆಯಲಿಲ್ಲ. ಅದಕ್ಕಾಗಿ ಅವನು ಹಿಂದೆ ಬಹಳ ತಪಸ್ಸು, ಪೂಜೆ ಮಾಡಿದ್ದ."

ಮಹಿಮಾಚರಣ ಎನ್ನುವವನು ಶ್ರೀರಾಮಕೃಷ್ಣರ ಒಬ್ಬ ಭಕ್ತ. ಅವನಿಗೆ ಯಾವಾಗಲೂ ಸೇವಾಕಾರ್ಯಗಳಲ್ಲಿ ತೊಡಗಿರುವುದರಲ್ಲಿ ಆಸಕ್ತಿ. ಪರೋಪಕಾರಾರ್ಥವಾಗಿ ಹೊಸ ಶಾಲೆಯೊಂದನ್ನು ತೆರೆದಿದ್ದ. ಅವನು ಒಂದು ದಿನ ಶ್ರೀರಾಮಕೃಷ್ಣರ ಬಳಿ ಮಾತನಾಡುತ್ತಿದ್ದ. ಆ ಸಂಭಾಷಣೆಯನ್ನು ಅವರ ಬಾಯಲ್ಲೇ ಕೇಳೋಣ:

ಶ್ರೀರಾಮಕೃಷ್ಣರು ಮಹಿಮಾಚರಣನಿಗೆ—"ಒಮ್ಮೆ ಶಂಭು ಮಲ್ಲಿಕ ನನಗೆ ಹೇಳಿದ : 'ನನ್ನಲ್ಲಿರುವ ಹಣವನ್ನು ಸತ್ಕಾರ್ಯಗಳಿಗೆ ಉಪಯೋಗಿಸಬೇಕೆಂದು ಸಂಕಲ್ಪಿಸಿದ್ದೇನೆ.' ನಾನು ಹೇಳಿದೆ, 'ನೀನು ಈ ಕಾರ್ಯಗಳನ್ನೆಲ್ಲಾ ನಿಷ್ಕಾಮ ಭಾವನೆಯಿಂದ ಮಾಡುವುದಾದರೇನೋ ಅದು ಬಹಳ ಒಳ್ಳೆಯದೇ, ಆದರೆ ಹಾಗೆ ಮಾಡುವುದು ಬಹಳ ಕಷ್ಟ. ಯಾವ ಕಡೆಯಿಂದಲೋ ಕಾಮನೆ, ನಮ್ಮ ಹೃದಯವನ್ನು ಹೊಕ್ಕಿಬಿಡುತ್ತದೆ. ನಿನಗೊಂದು ಪ್ರಶ್ನೆ ಹಾಕಬೇಕೆಂದಿದ್ದೇನೆ. ಒಂದು ಪಕ್ಷ ನಿನ್ನ ಎದುರು ಭಗವಂತ ಬಂದರೆ, ಆತನನ್ನು ಕೆಲವು ಸ್ಕೂಲು, ಡಿಸ್ಪೆನ್ಸರಿ, ಆಸ್ಪತ್ರೆ ಇವುಗಳಿಗಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೀಯೋ? '"

ಒಮ್ಮೆ ಇಬ್ಬರು ವಿದೇಶೀ ಸ್ತ್ರೀಯರು ಸ್ವಾಮಿ ಅದ್ಭುತಾನಂದರನ್ನು ಭೇಟಿ ಮಾಡಲು ಬಂದರು. ಅವರು ನಾಸ್ತಿಕರು. ಆದರೆ ಅವರು ಮಾನವರಿಗೆ ಸೇವೆ ಸಲ್ಲಿಸುವುದರಲ್ಲಿ ಆಸಕ್ತಿ ಉಳ್ಳವರಾಗಿದ್ದರು. ಒಬ್ಬಳು ಹೇಳಿದಳು, "ಸ್ವಾಮೀಜಿ, ಬೇರೆಯವರಿಗೆ ಒಳ್ಳೆಯದನ್ನು ಮಾಡುವುದೇ ಜೀವನದ ಧ್ಯೇಯ. ಆ ವಿಷಯದಲ್ಲಿ ನಾವು ನಿಮ್ಮ ಅಭಿಪ್ರಾಯವನ್ನು ಒಪ್ಪಿಕೊಳ್ಳುತ್ತೇವೆ. ಆದರೆ ನೀವು ಭಗವಂತನಿಗೆ ಅದಕ್ಕಿಂತ ಹೆಚ್ಚಿನ ಸ್ಥಾನವನ್ನು ಕೊಡುತ್ತೀರಿ. ಅದನ್ನು ನಾವು ಒಪ್ಪುವುದಿಲ್ಲ. ಭಗವಂತನನ್ನು ಕಾಣಲಾಗುವುದಿಲ್ಲ. ಅವನು ಇದ್ದಾನೆ ಎನ್ನುವುದಕ್ಕೂ ಯಾವ ಪ್ರಮಾಣವೂ ಇಲ್ಲ. ನೀವು ಈ ಕಾಣದ ದೇವನನ್ನು ನಂಬಿ, ಈ ಕೆಲಸಗಳನ್ನು ಮಾಡಿ ಎಂದು ಏಕೆ ಒತ್ತಾಯಿಸುತ್ತೀರೋ ನನಗೆ ಅರ್ಥವಾಗುತ್ತಿಲ್ಲ."

**ಸ್ವಾಮಿ ಅದ್ಭುತಾನಂದರು** : "ಯಾರು ಭಗವಂತನನ್ನು ನಂಬದೆ ಬರಿ ಜನರ ಸೇವೆಯನ್ನು ಮಾಡುತ್ತೇವೆ ಎನ್ನುವರೋ ಅವರು ಆ ಭಾವ ವನ್ನು ಬಹಳ ದಿನ ಇಟ್ಟುಕೊಳ್ಳಲಾರರು. ಸ್ವಲ್ಪ ಸಮಯದ ನಂತರ ನನಗೆ ಏನು ಲಾಭ ಎನ್ನುವ ಪ್ರಶ್ನೆ ಮನಸ್ಸಿಗೆ ಬರುವುದು. ಆಗ ಅವರು ಅದರಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುವರು. ಸ್ವಾರ್ಥರಹಿತ ರಾಗಿ ಸೇವೆ ಮಾಡಬೇಕಾಗಿದ್ದಲ್ಲಿ ತ್ಯಾಗಬುದ್ಧಿ ಇದ್ದರೆ ಮಾತ್ರ ಸಾಧ್ಯ. ಭಗವಂತನನ್ನು ನಂಬದವರಿಗೆ ಈ ತ್ಯಾಗಮನೋಬುದ್ಧಿ ಬರುವುದೇ ಇಲ್ಲ."

ಇದನ್ನು ಕೇಳಿ ಆ ಮಹಿಳೆಯರು ನಕ್ಕರು. ಒಬ್ಬಳು ಹೇಳಿದಳು: "ಸ್ವಾಮೀಜಿ, ಇದು ಸರಿಯಾದ ವಿವರಣೆಯಲ್ಲ."

**ಸ್ವಾಮಿ ಅದ್ಭುತಾನಂದರು** : "ಸರಿ, ಪರರ ಸೇವೆಯನ್ನು ಏಕೆ ಮಾಡ ಬೇಕು ಎಂದು ದಯವಿಟ್ಟು ತಿಳಿಸುವಿರಾ?"

**ವಿದೇಶಿ ಮಹಿಳೆ**: "ಯಾಕೆಂದರೆ ಅದರಿಂದ ಬೇರೆಯವರಿಗೆ ಒಳ್ಳೆಯ ದಾಗುತ್ತದೆ."

**ಸ್ವಾಮಿ ಅದ್ಭುತಾನಂದರು** : "ಇದರಿಂದ ನಿಮಗಾಗುವ ಲಾಭವೇನು? ಬೇರೆಯವರ ಹಿತಕ್ಕಾಗಿ ಯಾಕೆ ಕೆಲಸ ಮಾಡಬೇಕು?"

**ವಿದೇಶಿ ಮಹಿಳೆ**: "ಯಾಕೆಂದರೆ ನಾವು ಸಮಾಜದಲ್ಲಿರುವುದರಿಂದ ಇತರ ಜನರಿಗೆ ನಾವು ಬಾಧ್ಯರಾಗಿದ್ದೇವೆ. ಅವರ ಕೊರತೆಯನ್ನು ನೀಗಿಸುವುದು ನಮ್ಮ ಧರ್ಮ. ಇತರರ ದುಃಖವನ್ನು ಸಾಧ್ಯವಾದಷ್ಟು ಕಡಿಮೆ ಮಾಡುವುದೆ ನಮ್ಮ ಗುರಿ."

**ಸ್ವಾಮಿ ಅದ್ಭುತಾನಂದರು**: "ನೀವು ಹೇಳಿದ ಧ್ಯೇಯಕ್ಕಿಂತ ಇನ್ನೂ ಮಹತ್ತರವಾದ ಧ್ಯೇಯವೊಂದಿದೆ. ಅದು ಆತ್ಮಸಾಕ್ಷಾತ್ಕಾರ. ಯಾರು ಅದಕ್ಕಾಗಿ ಶ್ರಮಿಸುತ್ತಾನೋ ಅವನೇ ಧೀರ. ಬೇರೆಯವರಿಗೆ ಹಿತವನ್ನು ಮಾಡುವುದು ಸಾಮಾಜಿಕ ಕರ್ತವ್ಯವಷ್ಟೇ. ಇದರಿಂದ ನಮ್ಮ ಆಂತರಿಕ ದಿವ್ಯತೆಯ ಅರಿವಾಗುವುದಿಲ್ಲ. ಅದಲ್ಲದೆ ಸಾಮಾಜಿಕ ಸೇವೆಯಿಂದ ಬೇರೆಯವರಿಗೆ ಒಳ್ಳೆಯದಾಗಬಹುದು. ನಿಮ್ಮ ಜೀವನಕ್ಕೆ ಏನಾಯಿತು?'

ಆಗ ಇಬ್ಬರು ಮಹಿಳೆಯರಿಗೂ ಉತ್ತರ ಹೇಳಲು ತೋಚಲಿಲ್ಲ. ಸ್ವಾಮಿ ಅದ್ಭುತಾನಂದರು ಮುಂದುವರಿಸಿದರು : "ನೋಡಿದಿರಾ, ನಿಮ್ಮ ತರ್ಕದಲ್ಲಿ ಕೊರತೆಯಿದೆ. ಭಗವಂತನ ಇರುವಿಕೆಯನ್ನು ಒಪ್ಪಿದರೆ, ಎಲ್ಲದಕ್ಕೂ ಒಂದು ಅರ್ಥ ಬರುತ್ತದೆ. ನಮ್ಮ ಜೀವನ ದಲ್ಲಿ ಭಗವಂತನಿಗೆ ಒಂದು ಸ್ಥಾನವನ್ನು ಕೊಟ್ಟರೆ, ನಮ್ಮ ಜೀವನಕ್ಕೆ ಒಂದು ಅರ್ಥ ಬರುತ್ತದೆ. ನಮ್ಮಲ್ಲಿರುವ ಭೇದಗಳು ಕಡಿಮೆಯಾಗಿ ನಾವೆಲ್ಲ ಒಂದೇ ಎಂಬ ಭಾವನೆ ಬರುತ್ತದೆ. ಭೌತಿಕ ಮಟ್ಟದಲ್ಲಿ ನಮ್ಮೆಲ್ಲರಿಗೂ ವ್ಯತ್ಯಾಸವಿದ್ದರೂ ಆಧ್ಯಾತ್ಮಿಕ ನೆಲೆಯಲ್ಲಿ ನಾವೆಲ್ಲರೂ ಒಂದೇ ಸಚ್ಚಿದಾನಂದ ಸ್ವರೂಪರು. ಈ ದೃಷ್ಟಿಯಿಂದ ನಿಜವಾಗಿ ಯಾರು ಯಾರಿಗೂ ಸಹಾಯ ಮಾಡುತ್ತಿಲ್ಲ. ಆದರೆ ಆ ಸೇವೆಯಿಂದ ಪ್ರತಿಯೊಬ್ಬನೂ ತನಗೆ ಒಳ್ಳೆಯದನ್ನು ಉಂಟುಮಾಡಿ ಕೊಳ್ಳುತ್ತಾನೆ. ನಮ್ಮ ಸೇವಾಕಾರ್ಯದ ರಹಸ್ಯವೇ ಇದು. ಬೇರೆ ಯವರ ಒಳ್ಳೆಯದೇ ನಮ್ಮ ಒಳ್ಳೆಯದೆಂದು ಭಾವಿಸುತ್ತೇವೆ. ಇದು ನಮ್ಮ ಆದರ್ಶ. ದೇವರಲ್ಲಿ ನಂಬಿಕೆ ಇಟ್ಟುಕೊಂಡು ಸೇವೆ ಮಾಡಿದಾಗ ಮಾತ್ರ ಅತೃಪ್ತಿಯಿರುವುದಿಲ್ಲ."

**ವಿದೇಶಿ ಮಹಿಳೆ** : "ನಿಮ್ಮ ತರ್ಕದಲ್ಲಿ ನಮಗೆ ಒಂದು ವಿಷಯ ಅರ್ಥವಾಗುತ್ತಿಲ್ಲ. ಅದೆಂದರೆ ಬೇರೆಯವರು ಹೇಗೆ ನಮ್ಮ ಭಾಗ ವಾಗಲು ಸಾಧ್ಯ?"

**ಸ್ವಾಮಿ ಅದ್ಭುತಾನಂದರು** : "ನೋಡಿ, ಇದು ತರ್ಕದ ವಿಷಯ ವಲ್ಲ. ಆದರೆ ಉನ್ನತ ಅನುಭವದ ಸತ್ಯಾಂಶ. ಭೇದಗಳು ಬರಿ ನಾಮ ರೂಪದಲ್ಲಿ ಮಾತ್ರ. ಉದಾಹರಣೆಗೆ ನಾವು ಬೆಳ್ಳಿಯಿಂದ ಲೋಟ, ತಟ್ಟೆ, ಉಂಗುರ ಇತ್ಯಾದಿ ಆಭರಣಗಳನ್ನು ತಯಾರು ಮಾಡುತ್ತೇವೆ. ಆ ಆಭರಣಗಳಲ್ಲಿ ಪರಸ್ಪರ ವ್ಯತ್ಯಾಸವಿದ್ದರೂ ಎಲ್ಲವೂ ಬೆಳ್ಳಿಯಿಂದಲೇ ಮಾಡಿದ್ದಲ್ಲವೇ? ಅದೇ ರೀತಿಯಲ್ಲಿ ನಾವು ಹೊರನೋಟಕ್ಕೆ ಬೇರೆ ಬೇರೆಯಾಗಿದ್ದರೂ ತತ್ತ್ವಾಂಶದಲ್ಲಿ ನಾವೆಲ್ಲರೂ ಒಂದೇ ಸಚ್ಚಿದಾನಂದ ಸ್ವರೂಪರು. ಆದ್ದರಿಂದ ಎಲ್ಲರೂ ನಮ್ಮ ಭಾಗವೇ ಆದಂತಾಯಿತು. ಇತರರ ಸೇವೆಯಿಂದ ನಮ್ಮ ಸೇವೆಯೇ ಆದಂತಾಗುತ್ತದೆ.

**ವಿದೇಶಿ ಮಹಿಳೆ** : "ಇದಕ್ಕೆ ನಿದರ್ಶನವಿದೆಯೇ?"

**ಸ್ವಾಮಿ ಅದ್ಭುತಾನಂದರು** : "ಖಂಡಿತವಾಗಿ. ಆದರೆ ಇದನ್ನು ಬೇರೆ ಯವರಿಗೆ ಪ್ರದರ್ಶಿಸಿ ತೋರಿಸಲಾಗುವುದಿಲ್ಲ. ಇದು ಪ್ರತಿ ಯೊಬ್ಬನೂ ಅನುಭವ ಪೂರ್ವಕವಾಗಿ ಸಾಕ್ಷಾತ್ಕರಿಸಿಕೊಳ್ಳಬೇಕಾದ ವಿಷಯ. ಉದಾಹರಣೆಗೆ ಪ್ರೀತಿಯನ್ನು ಪ್ರದರ್ಶನದ ಮೂಲಕ ಅರ್ಥ ಮಾಡಿಸಲು ಸಾಧ್ಯವೇ? ಪರಸ್ಪರ ಪ್ರೀತಿಸುವವರು ಅದನ್ನು ಅನುಭವಿಸಬಲ್ಲರಷ್ಟೇ. ಭಗವಂತನ ವಿಷಯದಲ್ಲಿಯೂ ಹಾಗೆಯೇ. ಭಗವಂತನು ಯಾರ ಮೇಲೆ ಕೃಪೆ ಬೀರುತ್ತಾನೋ ಅವನು ಅದನ್ನು ಅರ್ಥ ಮಾಡಿಕೊಳ್ಳಬಲ್ಲ."

**ವಿದೇಶಿ ಮಹಿಳೆ** : "ಇದೊಂದು ಒಳ್ಳೆಯ ಉದಾಹರಣೆ. ಆದರೆ ನನ್ನ ಪ್ರಶ್ನೆಗೆ ಉತ್ತರ ಸಿಗಲಿಲ್ಲ. ಒಬ್ಬನು ಭಗವಂತನನ್ನು ನಂಬದೆ ಜನರಿಗೆ ಒಳ್ಳೆಯದನ್ನು ಮಾಡುತ್ತಾನೆ. ಅದಕ್ಕೆ ಅವನಿಗೆ ಪುಣ್ಯ ಸಿಗುವುದಿಲ್ಲವೆ?"

**ಸ್ವಾಮಿ ಅದ್ಭುತಾನಂದರು** : "ಖಂಡಿತ. ಪ್ರತಿಯೊಂದು ಕಾರ್ಯವೂ ಅದಕ್ಕೆ ಸಂಬಂಧಿಸಿದ ಫಲವನ್ನು ತರುತ್ತದೆ. ಒಬ್ಬ ಮನುಷ್ಯ ಸಮಾಜ ಸೇವೆ ಮಾಡಿದಲ್ಲಿ ಸಾಮಾಜಿಕ ಫಲವನ್ನು ಪಡೆಯುತ್ತಾನೆ. ಅದನ್ನೇನಾದರೂ ಅವನು ಅಹಂಕಾರದಿಂದ ಮಾಡಿದಲ್ಲಿ ಅದರಲ್ಲಿ ಅವನಿಗೆ ಒಳಿತಾಗುವುದಿಲ್ಲ. ಅದು ಅವನನ್ನು ಬಂಧಿಸಲೂ ಬಹುದು. ಈ ಕರ್ಮಚಕ್ರವನ್ನು ಅಹಂಕಾರಯುತವಾದ ಕರ್ಮದಿಂದ ದಾಟಲು ಸಾಧ್ಯವಿಲ್ಲ. ಆದರೆ ಅಹಂಕಾರರಹಿತ ಕಾರ್ಯ ಕರ್ಮಬಂಧನವನ್ನು ನಾಶಮಾಡಿ ಮುಕ್ತಿಯೆಡೆಗೆ ಕೊಂಡೊಯ್ಯುತ್ತದೆ."

**ವಿದೇಶಿ ಮಹಿಳೆ** : "ಇದು ನನಗೆ ಸರಿಯೆಂದು ತೋರುತ್ತಿಲ್ಲ. ಫಲಾಪೇಕ್ಷೆಯಿಲ್ಲದೆ ಕೆಲಸ ಮಾಡುವ ವ್ಯಕ್ತಿಯನ್ನು ನಾನು ಇದು ವರೆಗೂ ಕಂಡಿಲ್ಲ."

**ಸ್ವಾಮಿ ಅದ್ಭುತಾನಂದರು** : "ನಿಜ. ನಾನೂ ಕೂಡ ಫಲಾಪೇಕ್ಷೆ ಯಿಲ್ಲದೆ ಕೆಲಸ ಮಾಡುವುದು ಸುಲಭವೆಂದು ಹೇಳುತ್ತಿಲ್ಲ. ಭಗವಂತನ ಸಾಕ್ಷಾತ್ಕಾರವೇ ನಾವು ಬಯಸುವ ಕರ್ಮದ ಫಲ.

ಭಗವಂತನನ್ನು ನಾವು ನೇರವಾಗಿ ಕಾಣದಿದ್ದರೂ ಅವನ ಇರುವಿಕೆಯಲ್ಲಿ ದೃಢವಾದ ನಂಬಿಕೆಯಿರಬೇಕು. ಆ ನಂಬಿಕೆ ಅವನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಮೊದಲು ಅವನನ್ನು ನಂಬು, ನಂತರ ಅವನ ಮಕ್ಕಳನ್ನು ಪ್ರೀತಿಸು. ಒಂದು ಉದಾಹರಣೆಯನ್ನು ಹೇಳುತ್ತೇನೆ. ಒಂದೂರಿನಲ್ಲಿ ಒಬ್ಬ ಅತ್ಯಂತ ಪರಿಶ್ರಮದಿಂದ ಕೆಲಸ ಮಾಡುತ್ತಿದ್ದ. ಇವನ ಒಳ್ಳೆಯತನದ ಬಗ್ಗೆ ಯಾರೋ ಆ ಊರಿನ ರಾಜರಿಗೆ ಹೇಳಿದರು. ರಾಜ ಅವನನ್ನು ತನ್ನ ಬಳಿ ಕರಸಿಕೊಂಡ. ರಾಜನೊಡನೆ ಅವನ ಭೇಟಿ, ಅವನು ರಾಜನ ಪ್ರಜೆಗಳನ್ನು ಸೇವೆ ಮಾಡಿದ್ದರಿಂದ ದೊರೆಯಿತು. ಅದೇ ರೀತಿ ಎಲ್ಲರನ್ನೂ ಭಗವಂತನ ಮಕ್ಕಳೆಂದು ಭಾವಿಸಿ ನೀವು ಸೇವೆ ಮಾಡಿದಲ್ಲಿ ನಿಮಗೆ ಅವನ ಕೃಪೆ ಹಾಗೂ ದರ್ಶನ ದೊರೆಯುವುದು."

ಇಬ್ಬರು ಮಹಿಳೆಯರೂ ಅತ್ಯಂತ ತೃಪ್ತಿಯಿಂದ ಅದ್ಭುತಾನಂದರಿಂದ ಬೀಳ್ಕೊಂಡರು. ಅವರು ತಮ್ಮ ದೇಶವಾದ ರೋಮಿಗೆ ಹಿಂತಿರುಗಿದ ಮೇಲೆ ಪತ್ರ ಬರೆದು ತಮ್ಮ ಅಭಿನಂದನೆಯನ್ನು ತಿಳಿಸಿದರು.

ಶ್ರೀರಾಮಕೃಷ್ಣ ಸಂಸ್ಥೆಯ ಹತ್ತನೇ ಅಧ್ಯಕ್ಷರಾಗಿದ್ದ ಪರಮಪೂಜ್ಯ ಸ್ವಾಮಿ ವೀರೇಶ್ವರಾನಂದಜೀ ಮಹಾರಾಜ್ ಅವರು "ಶ್ರೀರಾಮಕೃಷ್ಣರ ಆಧುನಿಕ ಧರ್ಮ" ಎಂಬ ಉಪನ್ಯಾಸದಲ್ಲಿ ಸೇವೆಯ ಬಗ್ಗೆ ತಮ್ಮ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸಿದ್ದಾರೆ : "ಕರ್ಮವೇ ಪೂಜೆ, ಅದು ಸರಿ. ಆದರೆ ಇದರಲ್ಲಿ ಕಾರ್ಯಕ್ಷೇತ್ರಕ್ಕೆ ಇಳಿದಾಗ ವ್ಯಕ್ತಿ ತನ್ನ ಆದರ್ಶವನ್ನು ಮರೆತುಬಿಡಬಹುದಾದ ಅಪಾಯವಿದೆ. ಇದಕ್ಕಾಗಿ ಸ್ವಾಮಿ ವಿವೇಕಾನಂದರು ಆಧ್ಯಾತ್ಮಿಕ ಸಾಧನೆಯ ಹೊಸ ಪಥವೊಂದನ್ನು ರೂಪಿಸಿದರು. ಅದೆಂದರೆ ಸಾಧಕರು ಭಗವನ್ನಾಮ, ಜಪ, ಧ್ಯಾನ, ಪೂಜೆ, ಮೊದಲಾದ ಆಧ್ಯಾತ್ಮಿಕ ಸಾಧನೆಯನ್ನು ಮಾಡಬೇಕು, ಶಾಸ್ತ್ರಾಧ್ಯಯನ ಮಾಡಬೇಕು. ಕರ್ಮವನ್ನು ಭಗವಂತನ ಸಾಕ್ಷಾತ್ಕಾರಕ್ಕೆ ಬೇಕಾದ ಆಧ್ಯಾತ್ಮಿಕ ಸಾಧನೆಯಾಗಿ ಉಪಯೋಗಿಕೊಳ್ಳಬೇಕು. ಜಗತ್ತಿಗೆ ಸೇವೆ ಸಲ್ಲಿಸುವುದರ ಮೂಲಕ ಭಗವಂತನ ಸೇವೆಯನ್ನೇ ಮಾಡಬೇಕು. ಕರ್ಮವೇ ಗುರಿಯಲ್ಲ. ಸಮಾಜ ಸೇವೆಯು ಅಂತಿಮ ಉದ್ದೇಶವಲ್ಲ. ಗುರಿ ಭಗವಂತನ ಸಾಕ್ಷಾತ್ಕಾರ. ಕರ್ಮಯೋಗ ಈ ಗುರಿಗೆ ಕರೆದೊಯ್ಯುವ ದಾರಿ. ಉದಾಹರಣೆಗೆ ಉಕ್ಕನ್ನು ತಯಾರಿಸುವ ಕಾರ್ಖಾನೆಯೊಂದಿದೆ. ಅಲ್ಲಿ ಉಕ್ಕನ್ನು ತಯಾರಿಸುವಾಗ ಇನ್ನಿತರ ಕೆಲವು ಉಪ-ಉತ್ಪನ್ನಗಳು ತಯಾರಾಗುತ್ತವೆ. ಅದಕ್ಕೂ ಮಾರುಕಟ್ಟೆಯಲ್ಲಿ ಬೆಲೆಯಿರುತ್ತದೆ. ಆದರೆ ಈ ಉಪ-ಉತ್ಪನ್ನಗಳ ತಯಾರಿಕೆಯೇ ಕಾರ್ಖಾನೆಯ ಮುಖ್ಯ ಉದ್ದೇಶವಲ್ಲ."

ಅಂದರೆ ಇದೆಲ್ಲದರಿಂದ ಸ್ಪಷ್ಟವಾಗಿ ಅರ್ಥವಾಗುವ ವಿಷಯವೆಂದರೆ ಭಗವಂತನ ಸಾಕ್ಷಾತ್ಕಾರವೇ ಮಾನವ ಜೀವನದ ಪರಮ ಉದ್ದೇಶ. ಸಾಧಾರಣ ಭಕ್ತರು ಒಂದೇ ಸಲಕ್ಕೆ ಪೋಸ್ಟ್ಮಾಂ ಪರ್ಬುರಂತಹವರನ್ನು ಅನುಸರಿಸಲಿಕ್ಕೆ ಹೋಗಬಾರದು. ಶ್ರೀರಾಮಕೃಷ್ಣರು ಉಪದೇಶಿಸಿರುವಂತೆ ಭಗವಂತನಲ್ಲಿ ಸಂಪೂರ್ಣ ಶ್ರದ್ಧೆಯನ್ನಿಟ್ಟುಕೊಂಡು ಅವನನ್ನು ಪ್ರಾರ್ಥಿಸುವುದರಲ್ಲಿ ನಂಬಿಕೆಯನ್ನಿಟ್ಟು ಅವನಿಗಾಗಿ ಹಂಬಲಿಸುತ್ತಾ ನಾಮಜಪ, ನಿರ್ಜನವಾಸ, ಸತ್ಸಂಗ ಮತ್ತು ಸಮಾಜಸೇವೆ ಈ ಮಾರ್ಗಗಳನ್ನು ಅನುಸರಿಸಿ ಭಗವತ್ಸಾಕ್ಷಾತ್ಕಾರಕ್ಕೆ ಪ್ರಯತ್ನ ಪಡಬೇಕು. ❄

# ಶ್ರೀಭೃಂಗ

ಎಸ್. ಮಧುಸೂದನ್

ಇಲ್ಲಿ ಕವಿಕಲ್ಪನೆ ಭಕ್ತಿರಸವಾಗಿ ಹರಿದು ಬಂದಿದೆ. ಭಕ್ತಹೃದಯವನ್ನು ಕಲಕುವ ಈ ಕಿರುಲೇಖನವನ್ನು ಬರೆದಿರುವ ಶ್ರೀ ಮಧುಸೂದನ್ ಅವರು ಪ್ರಸ್ತುತ ಸಿಂಗಪುರದಲ್ಲಿ ಕೆಲಸ ಮಾಡುತ್ತಿರುವರು.

**ಭೃಂಗ** ಎಂದೊಡನೆ ನಮ್ಮ ಮನಸ್ಸಿಗೆ ಬರುವ ಚಿತ್ರ ಹೂದೋಟದಲ್ಲಿ ಹೂವಿನಿಂದ ಹೂವಿಗೆ ಝೇಂಕರಿಸುತ್ತಾ ಮಕರಂದವನ್ನು ಹೀರುವ ಒಂದು ಕೀಟ. ಈ ಭೃಂಗ ಮತ್ತು ಹೂವಿನ ನಂಟು ಕವಿತೆಗಳಲ್ಲಿ ಕಾವ್ಯಮಯವಾಗಿ ಚಿತ್ರಿತವಾಗಿರುವುದುಂಟು. ಇದರ ಚಲನವಲನಗಳು, ಹಾರುವ ಕ್ರಮ ಇವೆಲ್ಲವೂ ವಿಜ್ಞಾನಿಗಳಿಗೂ ಸಹ ಇದರ ಬಗ್ಗೆ ಸಂಶೋಧನಾತ್ಮಕ ಅಧ್ಯಯನ ಮಾಡುವಷ್ಟು ವಿಶಿಷ್ಟವಾಗಿದೆ. ಇದಲ್ಲದೆ ನಮ್ಮ ನಕಾರಾತ್ಮಕವಾಗಿರುವ ಮನಸ್ಸು ಸಕಾರಾತ್ಮಕವಾಗುವುದಕ್ಕೆ ಈ ಭೃಂಗದ ಉದಾಹರಣೆಯನ್ನು ನಮ್ಮ ಮುಂದಿಡುವರು ಮನೋವಿಜ್ಞಾನಿಗಳು. *Thermodynamics* ಎಂಬ ಭೌತವಿಜ್ಞಾನದ ಶಾಖೆಯ ಪ್ರಕಾರ ಈ ಭೃಂಗದ ರಚನೆಯನ್ನು ನೋಡಿದರೆ ಅದು ಹಾರಲು ಅಸಾಧ್ಯ. ಕಾರಣ ಭೃಂಗದ ಆಕಾರಕ್ಕೆ ಹೋಲಿಸಿದರೆ ಅದರ ರೆಕ್ಕೆ ಬಹಳ ಚಿಕ್ಕದು ಹಾಗೂ ತೆಳುವಾದದ್ದು . ಆದರೂ ಈ ಭೃಂಗ ಹಾರಲು ಹೇಗೆ ಸಾಧ್ಯ ಎಂಬುದು ಅವರ ಪ್ರಶ್ನೆ. ಇದನ್ನು ಅವರು ಹಾಸ್ಯಮಯವಾಗಿ ಹೀಗೆ ಹೇಳುವರು: "ಒಂದು ವೇಳೆ ಭೃಂಗವೇನಾದರೂ thermodynamics ಓದಿದ್ದ ಪಕ್ಷಕ್ಕೆ ಹಾರುವುದನ್ನು ಅದು ನಿಲ್ಲಿಸಬಹುದು." ಆದರೂ ಈ ಭೃಂಗ ಹೂವಿನಿಂದ ಹೂವಿಗೆ ಹಾರುವುದು ಹೇಗೆ? ಇದಕ್ಕೆ ಉತ್ತರವೆಂಬಂತೆ ಶ್ರೀರಾಮಕೃಷ್ಣರ ವಚನವೇದದಲ್ಲಿ ಅವರೇ ಹೇಳುವುದನ್ನು ನೋಡಬೇಕು. "ಹೂ ಅರಳಿದರೆ ಭೃಂಗವು ತಾನೇ ತಾನಾಗಿ ಬರುವುದು."

ಈ ಭೃಂಗದ ಸಮಾಚಾರ ಪರಮಹಂಸರಿಗೆ ಗೊತ್ತಾದದ್ದು ಹೇಗೆ? ಹೇಗೆಂದರೆ ಅವರೇ ಸ್ವಯಂ ಒಂದು ಭೃಂಗ. ಶ್ರೀರಾಮಕೃಷ್ಣ ಸುಪ್ರಭಾತದಲ್ಲಿ ಒಂದು ವಾಕ್ಯವಿದೆ "ಹೇ, ಕಾಳಿಕಾಪದ ಸರೋರುಹ ಕೃಷ್ಣ ಭೃಂಗ"—ಇಲ್ಲಿ ಶ್ರೀರಾಮಕೃಷ್ಣರನ್ನು ಕಾಳಿಕಾಪದ ಕಮಲದ ಕಪ್ಪು ಭೃಂಗ ಎಂದು ಸಂಬೋಧಿಸಿರುವುದನ್ನು ಸ್ವಲ್ಪ ವಿಶ್ಲೇಷಿಸೋಣ.